**NOVEMBER 16,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದುತ್ತಿರುವವರು: ವಿವೇಕಾದಿತ್ಯ ಕನಿಯಾಲ

<><><>

ಕೃಷಿ ಪ್ರಧಾನ ಹಾಗೂ ಕೃಷಿ ಅವಲಂಬಿತ ಆರ್ಥಿಕತೆ ಹೊಂದಿರುವ, ಭಾರತದಲ್ಲಿ, ಅಪಾರ ಜನಸಂಖ್ಯೆಗೆ, ಆಹಾರ ಹಾಗೂ ಪೌಷ್ಟಿಕಾಂಶಗಳ ಬೇಡಿಕೆಗಳನ್ನು, ಕೃಷಿ ಕ್ಷೇತ್ರ ಮಾತ್ರ ಪೂರೈಸಬಲ್ಲದು ಎಂದು, ರಾಜ್ಯ ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್ ಬೋಸರಾಜು ಅಭಿಪ್ರಾಯಪಟ್ಟಿದ್ದಾರೆ. ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ, 'ಕೃಷಿ ಬೆಳವಣಿಗೆಗೆ ಹೊಸ ದೃಷ್ಟಿಕೋನ' ಶೀರ್ಷಿಕೆಯಡಿ ಆಯೋಜಿತ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳ ಸಂವಾದ ಕಾರ್ಯಕ್ರಮದಲ್ಲಿ, ಪಾಲ್ಗೊಂಡು ಅವರು ಮಾತನಾಡಿದರು. ನಾಡಿನ ರೈತರ ಹಿತ ರಕ್ಷಣೆಯ ಮೂಲಕ, ರಾಜ್ಯ ಸರ್ಕಾರ, ಕೃಷಿ ಕ್ಷೇತ್ರಕ್ಕೆ ಆಸರೆಯಾಗಲು ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ರಾಯಚೂರು ಜಿಲ್ಲೆಯ ಎರಡೂ ಕಡೆಗಳಲ್ಲಿ, ಕೃಷ್ಣ ಹಾಗೂ ತುಂಗಭದ್ರಾ ನದಿಗಳಿವೆ. ರಾಯಚೂರು ಸಂಪೂರ್ಣ ಕೃಷಿ ಅವಲಂಬಿತ ಪ್ರದೇಶವಾಗಿದೆ ಎಂದರು.

<><><>

ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ, ಹೆಸರು ಕಾಳು ಖರೀದಿ ಅವಧಿಯನ್ನು ಡಿಸೆಂಬರ್ 18ರ ವರೆಗೆ ವಿಸ್ತರಿಸಲಾಗಿದೆ ಎಂದು ಕೃಷಿ ಮಾರುಕಟ್ಟೆ ಖಾತೆ ಸಚಿವ ಶಿವಾನಂದ ಪಾಟೀಲ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಪ್ರತಿ ಕ್ವಿಂಟಾಲ್ ಹೆಸರು ಕಾಳಿಗೆ, 8 ಸಾವಿರದ 682 ರೂಪಾಯಿ ನಿಗದಿಪಡಿಸಲಾಗಿದೆ. ಇದು ವರೆಗೆ, 20 ಸಾವಿರದ 450 ಮೆಟ್ರಿಕ್ ಟನ್, ಖರೀದಿಸಲಾಗಿದೆ. ಬೆಳಗಾವಿ, ಬೀದರ, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ, ಹೆಸರು ಕಾಳು ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ, ಎಂದಿದ್ದಾರೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಮುಗದ ಕೃಷಿ ಸಂಶೋಧನಾ ಕೇಂದ್ರ ಇಂದು, ಶತಮಾನೋತ್ಸವದ ಸಂಭ್ರಮದಲ್ಲಿದೆ. ಕಾರ್ಯಕ್ರಮ ಇದೀಗ ಆರಂಭವಾಗಿದ್ದು, ಹೈದರಾಬಾದಿನ, ಅಖಿಲ ಭಾರತ ಭತ್ತ ಸಂಶೋಧನಾ ನಿರ್ದೇಶನಾಲಯದ ನಿರ್ದೇಶಕ ಆರ್.ಎಂ. ಸುದರಂ, ಮುಗದ ಗ್ರಾಮ ಪಂಚಾಯ್ತಿ ಅಧ್ಯಕ್ಷ ರವಿ ಕಸಮಳಗಿ, ಅತಿಥಿಗಳಾಗಿ ಭಾಗವಹಿಸಿದ್ದಾರೆ. ಉಪ ಕುಲಪತಿ ಪಿ.ಎಲ್. ಪಾಟೀಲ ಅಧ್ಯಕ್ಷತೆ ವಹಿಸಿದ್ದಾರೆ. ಧಾರವಾಡ ಮನಗುಂಡಿಯ, ಶ್ರೀ ಬಸವಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದಾರೆ.

<><><>

ಶೋಷಿತ ವರ್ಗಗಳ ಅಭಿವೃದ್ಧಿಗೆ, ಸರ್ಕಾರ ಮೀಸಲಿಟ್ಟ ಅನುದಾನವನ್ನು, ಸಮರ್ಪಕವಾಗಿ ಮತ್ತು ಕಾಲಮಿತಿಯಲ್ಲಿ, ಯೋಜಿತವಾಗಿ ಬಳಸುವಂತೆ, ರಾಜ್ಯ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ, ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ. ಬಾಗಲಕೋಟೆ ಜಿಲ್ಲಾ ಪಂಚಾಯ್ತಿಯ, ನೂತನ ಸಭಾಭವನದಲ್ಲಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ, ಅಭಿವೃದ್ಧಿಗಾಗಿ ಜಾರಿಗೊಂಡ, ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. 2013 ರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಹಿತರಕ್ಷಣೆಗಾಗಿ, ಪ್ರತ್ಯೇಕ ಕಾಯ್ದೆ ಜಾರಿಗೊಂಡಿದೆ. ಸಾಮಾಜಿಕ ಅಸಮಾನತೆ ಎಂಬುದು ಸಮಾಜಕ್ಕೆ ಅಂಟಿದ ಪಿಡುಗು. ಅಧಿಕಾರಿಗಳು ಬದ್ಧತೆಯಿಂದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಿದರೆ, ದುರ್ಬಲ ವರ್ಗದವರನ್ನು ಮುಖ್ಯವಾಹಿನಿಗೆ ತರಬಹುದು ಎಂದು, ಅವರು ನುಡಿದರು.

<><><>

ಜನ ಬದಲಾಗದ ಹೊರತು, ಭ್ರಷ್ಟಾಚಾರದ ನಿರ್ಮೂಲನೆ ಅಸಾಧ್ಯ. ಸ್ವಭಾವ ಮತ್ತು ಸಂಸ್ಕಾರ ಸ್ವಚ್ಛತೆಗೆ, ಸಾರ್ವಜನಿಕ ಬದುಕಿನಲ್ಲಿ ಪ್ರತಿಯೊಬ್ಬರೂ ಆದ್ಯತೆ ನೀಡಬೇಕು ಎಂದು, ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ ಆಶಿಸಿದ್ದಾರೆ. ಕಲಬುರಗಿ ನಗರದ ಎಸ್.ಎಂ. ಪಂಡಿತ ರಂಗಮಂದಿರದಲ್ಲಿ, ಸಾರ್ವಜನಿಕ ಕುಂದುಕೊರತೆಗಳ ಅಹವಾಲು ಆಲಿಸಿ, ಅವರು ಮಾತನಾಡಿದರು. ದೇಶದ 130 ಕೋಟಿ ಜನಸಂಖ್ಯೆಯಲ್ಲಿ, ಶೇಕಡ 10 ರಷ್ಟು ಜನ ಪ್ರಾಮಾಣಿಕವಾಗಿ, ದುಡಿದು ಬದುಕುತ್ತಿದ್ದಾರೆ. ಬ್ರಿಟಿಷರು ಬಿಟ್ಟು ಹೋದ, ಒಡೆದು ಆಳುವ ನೀತಿ, ಇಂದಿಗೂ ಸಮಾಜಕ್ಕೆ ಸಂಕಷ್ಟವನ್ನು ತಂದೊಡ್ಡುತ್ತಿದೆ ಎಂದರು.

<><><>

ಸಿಖ್ ಧರ್ಮದ ಸಂಸ್ಥಾಪಕ ಹಾಗೂ ಪ್ರಥಮ ಗುರು, ಶ್ರೀ ಗುರು ನಾನಕ ದೇವ್ ಅವರ, 555ನೇ ಜಯಂತ್ಯುತ್ಸವ, ಬೀದರ ನಗರದಲ್ಲಿ ಶ್ರದ್ಧಾ–ಭಕ್ತಿಯಿಂದ ಜರುಗಿತು. ದೇಶದ ವಿವಿಧೆಡೆಗಳಿಂದ ಆಗಮಿಸಿದ್ದ, ಸಿಖ್ ಬಾಂಧವರು, ಗುರು ಪರಬ್ ಹಬ್ಬವನ್ನು, ಸಂಭ್ರಮದಿಂದ ಆಚರಿಸಿದರು. ದೀಪಾಲಂಕಾರ, ತಳಿರು ತೋರಣಗಳಿಂದ ಬೀದರ ನಗರದ ಗುರುದ್ವಾರವನ್ನು ಸಿಂಗರಿಸಲಾಗಿತ್ತು. ಸಾಯಂಕಾಲ ಪವಿತ್ರ ಗ್ರಂಥ “ಗುರುಗ್ರಂಥ ಸಾಹೀಬ” ಭವ್ಯ ಮೆರವಣಿಗೆ, ಹೃದಯಂಗಮವಾಗಿತ್ತು. ಮೆರವಣಿಗೆಯಲ್ಲಿ ಕತ್ತಿ ವರಸೆ, ಕುದುರೆಗಳ ಮೇಲೆ ಸವಾರಿ, ವಿವಿಧ ಭಜನೆ ಮೇಳ ಸೇರಿದಂತೆ ವಿವಿಧ ಕಲಾ ಹಾಗೂ ಸಾಹಸ ತಂಡಗಳ ಸಾಹಸಮಯ ಪ್ರದರ್ಶನಗಳು ಜನಾಕರ್ಷಣೆಯಾಗಿದ್ದವು.

<><><>

ಕಲ್ಯಾಣ ಕರ್ನಾಟಕ ವ್ಯಾಪ್ತಿಯ, ಏಳು ಜಿಲ್ಲೆಗಳಲ್ಲಿ, 480 ಸಮುದಾಯ ಶೌಚಾಲಯಗಳ ನಿರ್ಮಾಣವನ್ನು, 2025ರ ಜನೆವರಿ ಅಂತ್ಯದೊಳಗೆ, ಪೂರ್ಣಗೊಳಿಸಲಾಗುವುದು ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಈ ವಿಷಯ ಪ್ರಕಟಿಸಿರುವ ಸಚಿವರು, ಸಮುದಾಯ ಶೌಚಾಲಯ ನಿರ್ಮಾಣ ವಿನೂತನ ಪ್ರಯೋಗವಾಗಿದೆ. ನಿರ್ಮಾಣದ ನಂತರ, ನಿರ್ವಹಣೆಯಿಲ್ಲದೆ ಸೊರಗಬಾರದು ಎಂಬ ಉದ್ದೇಶದಿಂದ, ಹೊಸ ಪದ್ಧತಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ, ಎಂದಿದ್ದಾರೆ.

<><><>

ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯ ಪಕ್ಕದ ಮೈದಾನದಲ್ಲಿ, ನಾಳೆ, ಭಾನುವಾರ ಬೆಳಗ್ಗೆ 10 ಗಂಟೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 71 ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಉದ್ಘಾಟಿಸಲಿದ್ದಾರೆ. ಈ ಬಾರಿಯ ಸಹಕಾರ ರತ್ನ ಪ್ರಶಸ್ತಿಗೆ ಕೋಲಾರ ಶಾಸಕ ಕೊತ್ತೂರು ಜಿ. ಮಂಜುನಾಥ ಆಯ್ಕೆಯಾಗಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>